## -: ವಾರ್ಡ್ ಸಮಿತಿ ಸಭೆ :-

## ದಿನಾಂಕ: 06.02.2021

ವಿಷಯ: ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 06.02.2021 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಚಂದ್ರಶೇಖರ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಅಧ್ಯಕ್ಷರು)
2. ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು, (ಕಾರ್ಯದರ್ಶಿ)
3. ಕುಮಾರಿ ಕೆ. ಸಮಂಜಸ ಸಹಾಯಕ ಅಭಿಯಂತರರು
4. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ಪ್ರದೀಪ್ ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಕೆ. ಜಾಕಬ್, ಕಿರಿಯ ಆರೋಗ್ಯ ಪರಿವೀಕ್ಷಕರು
7. ಡಾ॥ ಕುಸುಮ,
8. ಪ್ರಕಾಶ್, ಬೀದಿ ದೀಪಗಳ ನಿರ್ವಹಣೆ,
9. ವೆಂಕಟೇಶ್, ಕಂದಾಯ ಪರಿವೀಕ್ಷಕರು
10. ಜಿ. ವೆಂಕಟೇಶ್ ಕಂದಾಯ ವಸೂಲಿಗಾರರು,
11. ಪ್ರಶಾಂತ್, ಮಾರ್ಷಲ್
12. ಶ್ರೀ ನಾಗರಾಜ್, ಸೂಪರ್‌ವೈಸರ್, ಘನತ್ಯಾಜ್ಯ ನಿರ್ವಹಣೆ,
13. ರಫೀಕ್ ಅಹಮದ್,

ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು:-

1. ಶ್ರೀ ಬಿ.ಡಿ. ಶ್ರೀನಿವಾಸ್
2. ಶ್ರೀ ಕೆ.ಪಿ. ಅಶೋಕ್
3. ಶ್ರೀ ರವಿಕುಮಾರ್
4. ಶ್ರೀ ಜಿ. ಸತ್ಯನಾರಾಯಣ
5. ಶ್ರೀ ರಾಜೇಶ್ ಶಾಸ್ತ್ರಿ
6. ಶ್ರೀಮತಿ ಲಲಿತಮ್ಮ
7. ಶ್ರೀಮತಿ ಇಂದ್ರಮ್ಮ
8. ಶ್ರೀ ನಾಗರಾಜು
9. ಶ್ರೀ ಹೇಮಂತ್
10. ಎನ್.ಜಿ. ಗೋವಿಂದಯ್ಯ

. . . . . .2

Scanned with CamScanner

ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಬೀದಿ ದೀಪ ನಿರ್ವಹಣೆ ಸರಿಯಾಗಿ ಆಗುತ್ತಿರುವುದಿಲ್ಲ ಎಂದು ದೂರು ನೀಡಿದ್ದು, ಈ ಬಗ್ಗೆ ವಿದ್ಯುತ್ ವಿಭಾಗಕ್ಕೆ ತಿಳಿಸಲು ಸೂಚಿಸಿರುತ್ತಾರೆ.
2. ಜಲ ಮಂಡಳಿಯಿಂದ ಕಸ್ತೂರಿ ಬಡಾವಣೆಯಲ್ಲಿ ನೀರು ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ ಎಂದು ದೂರಿದ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಂಜಿನಿಯರ್ ರವರಿಗೆ ಸೂಚಿಸಿರುತ್ತಾರೆ.
3. ಕಮಲಾನಗರ ಮುಖ್ಯ ರಸ್ತೆಯಲ್ಲಿ ಕಸದ ವಾಹನಗಳನ್ನು ನಿಲ್ಲಿಸುವುದರಿಂದ ಸಂಚಾರ ದಟ್ಟಣೆಯಿಂದ ಕೂಡಿರುತ್ತದೆ ಎಂಬ ದೂರಿನ ಮೇಲೆ ಸಂಬಂಧಿಸಿದ ಪೋಲೀಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.
4. ಬೀದಿ ದೀಪಗಳು On/Off ಸರಿಯಾಗಿಲ್ಲದಿರುವುದರಿಂದ ಹಗಲು ವೇಳೆಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ದೂರು ಬಂದ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.
5. ಬೃಹತ್ ಮಳೆ ನೀರು ಗಾಲುವೆ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗುವಂತೆ ಪತ್ರ ವ್ಯವಹರಿಸಿ ಹಾಜರಾಗುವಂತೆ ಸೂಚಿಸಲಾಯಿತು.
6. ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಶ್ರೀ ಲೋಕೇಶ್ ಬಿನ್ ಆರ್. ರಾಮಣ್ಣ, ನಂ. 467, 4ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ಕಮಲಾನಗರ, ಬೆಂಗಳೂರು-79. ರವರಿಗೆ ಅನುಮೋದನೆ ದೊರೆತಿರುತ್ತದೆ. ಆದರೆ ಸದರಿಯವರು ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನೀಡುವ ಅನುದಾನದಲ್ಲಿ ಮನೆ ನಿರ್ಮಿಸಿಕೊಂಡಿರುವ ಕಾರಣ ಅವರ ಅನುಮತಿ ಪತ್ರವನ್ನು ರದ್ದುಗೊಳಿಸಲು ಸೂಚಿಸಲಾಯಿತು..
7. ಶ್ರೀಮತಿ ಹೇಮಾವತಿ ವಿ. ನಂ. 307, ಕಮಲಾನಗರ ಸರ್ವೆ ನಂ. 46, ಬೆಂಗಳೂರು ರವರು ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಅನುದಾನ ಕೋರಿರುತ್ತಾರೆ.
8. ಈಗಾಗಲೇ ಮಂಜೂರಾಗಿರುವ ಶ್ರೀ ಲೋಕೇಶ್ ಬಿನ್ ಆರ್. ರಾಮಣ್ಣ, ರವರ ಬದಲಾಗಿ ಶ್ರೀ ಹೇಮಾವತಿ ವಿ. ರವರಿಗೆ ಅನುದಾನ ಬದಲಾಯಿಸಿಕೊಡಲು ಹಾಗೂ ವೈಯಕ್ತಿ ಮನೆ ನಿರ್ಮಿಸಿಕೊಳ್ಳಲು ಅನುದಾನ ನೀಡಲು ಮೇಲಾಧಿಕಾರಿಗಳಿಗೆ ಮಂಡಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

Deeley Baj
ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿಗಳು,
ವಾರ್ಡ್ ನಂ. 74 ಶಕ್ತಿಗಣಪತಿನಗರ

6/7/2021
ಅಧ್ಯಕ್ಷರು
ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 74,
ಶಕ್ತಿಗಣಪತಿನಗರ

Scanned with CamScanner